# ಬೆಂಗಳೂರು ನಗರದ 27 ಶಾಸಕರ ಮೌಲ್ಯಮಾಪನ ಬಿ.ಪ್ಯಾಕ್ ನಿಂದ ಬಿಡುಗಡೆ

*ಶಾಸಕರ ಆಯ್ಕೆ ಅವಧಿಯ 2013ರಿಂದ 2018ರವರೆಗಿನ 8 ಅಳತೆಗೋಲುಗಳನ್ನಾಧರಿಸಿದ ಮೌಲ್ಯಮಾಪನ*

**ಬೆಂಗಳೂರು, ಶುಕ್ರವಾರ, ಏಪ್ರಿಲ್ 13,2018**

ಬೆಂಗಳೂರು ರಾಜಕೀಯ ಕಾರ್ಯ ಸಮಿತಿಯು (ಬಿ.ಪ್ಯಾಕ್) ಈ ಅಧ್ಯಯನವನ್ನು ಬೆಂಗಳೂರು ನಗರದ 27 ವಿಧಾನಸಭಾ ಕ್ಷೇತ್ರಗಳಲ್ಲಿ ಕೇಂದ್ರೀಕರಿಸಿದ್ದು ಇಂದು ಶಾಸಕರ ಮೌಲ್ಯಮಾಪನ ಬಿಡುಗಡೆ ಮಾಡಿದೆ.

ಬೆಂಗಳೂರು ಹಲವಾರು ಕ್ಷೇತ್ರಗಳಲ್ಲಿ ಪ್ರಗತಿಶೀಲ ನಗರವಾಗಿದ್ದರೂ ಕಳೆದ ಚುನಾವಣೆಯಲ್ಲಿ ಅತಿ ಕಡಿಮೆ ಮತದಾನ ನಡೆದ ನಗರವಾಗಿದೆ. ಬೆಂಗಳೂರಿನಲ್ಲಿ 2008 ಮತ್ತು 2013ರ ವಿಧಾನಸಭೆ ಚುನಾವಣೆಗಳಲ್ಲಿ ಕ್ರಮವಾಗಿ 47.22% ಮತ್ತು 58.27% ಮತದಾನ ನಡೆದಿದೆ.

ಬಿ.ಪ್ಯಾಕ್ ಚುನಾವಣ ಹಬ್ಬದ ಅಂಗವಾಗಿ ಉಪಕ್ರಮವು ಹಲವಾರು ಕಾರ್ಯಕ್ರಮಗಳನ್ನು ನಡೆಸಿತು.

| ಕಾರ್ಯಕ್ರಮಗಳು | ಪರಿಣಾಮ |
|---|---|
| ಒಂದು ದಶಲಕ್ಷ ಹೊಸ (OMNV) ಮತದಾರರ ದಾಖಲಾತಿಗಳನ್ನು ಕೈಗೊಳ್ಳಲು ಪ್ರಚಾರ ಕಾರ್ಯಕ್ರಮ ಆಯೋಜನೆ | ವಸತಿ ಸಮುದಾಯಗಳು, ಟೆಕ್ ಕ್ಯಾಂಪಸ್ಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಾದ್ಯಂತ 56 ಶಿಬಿರಗಳನ್ನು ನಡೆಸಿ 14,830 ನೋಂದಾಯಿತ ನಮೂನೆಗಳುನ್ನು ವಿತರಿಸಲಾಯಿತು |
| ನನ್ನ ಕ್ಷೇತ್ರ, ನನ್ನ ಪ್ರಣಾಳಿಕೆ ಕಾರ್ಯಕ್ರಮ ಆಯೋಜಿಸುವ ಮೂಲಕ ತಮ್ಮ ಪ್ರದೇಶಗಳಲ್ಲಿನ ಸಮುದಾಯಗಳಿಗೆ ಸಂಬಂಧಿಸಿದಂತೆ ಆಗ ಬೇಕಾದ ಅಭಿವೃದ್ಧಿ ಕೆಲಸಗಳನ್ನು ಪಟ್ಟಿ ಮಾಡುವ ಆಂದೋಳನ | ನಾಗರಿಕರು ಮತ್ತು ನಿವಾಸಿ ಸಂಘಗಳ ಮೂಲಕ 14 ಲೋಕಸಭಾ ಕ್ಷೇತ್ರಗಳಲ್ಲಿ ಸಭೆಗಳನ್ನು ನಡೆಸಲಾಯಿತು. ನನ್ನ ಕ್ಷೇತ್ರ, ನನ್ನ ಪ್ರಣಾಳಿಕೆ ಕಲ್ಪನೆಯಡಿ ಬೆಂಗಳೂರು ನಗರಕ್ಕೆ ನಾಗರಿಕರ ಪ್ರಣಾಳಿಕೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಮತ್ತು ರಾಜಕೀಯ ಪಕ್ಷದ ನಾಯಕರಿಗೆ ಹಸ್ತಾಂತರಿಸಲಾಗುತ್ತಿದೆ |
| **ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ** | ಆಡಳಿತದಲ್ಲಿ ಜನರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಹಾಗೂ ನಗರ ಚುನಾಯಿತ ಪ್ರತಿನಿಧಿಗಳೊಂದಿಗೆ ತೊಡಗಿಸಿಕೊಳ್ಳಲು ತಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಶಾಸಕರನ್ನು ಜೊತೆ ಮಾಡಲಾಯಿತು |

ಮುಂಬರುವ ಚುನಾವಣೆಯಲ್ಲಿ ಪಾಲ್ಗೊಳ್ಳಲು ನಾಗರಿಕರನ್ನು ಪ್ರೋತ್ಸಾಹಿಸುವ ಸಲುವಾಗಿ ಪ್ರಯತ್ನಗಳನ್ನು ಮುಂದುವರೆಸಿದ ಬಿ.ಪ್ಯಾಕ್ ಬೆಂಗಳೂರು ನಗರ ಶಾಸಕರ ಮೌಲ್ಯಮಾಪನ ಅಧ್ಯಯನವನ್ನು ಕೈಗೊಂಡಿದೆ.

ಬೆಂಗಳೂರು ನಗರ ಶಾಸಕರ ಮೌಲ್ಯಮಾಪನ ವಿವರಗಳು ಈ ಕೆಳಗಿನಂತಿದೆ

**<u>8 ಮೌಲ್ಯಮಾಪನ ಮಾನದಂಡಗಳು ಮತ್ತು ಕಾರ್ಯವಿಧಾನ</u>**

- ಮಾಹಿತಿ ಮೂಲ- ಕರ್ನಾಟಕ ವಿಧಾನಸಭೆ ವೆಬ್ ಸೈಟ್ ಮತ್ತು ವಿಧಾನಸಭೆ ಕಚೇರಿ ಪೂರೈಸಿದ ಮಾಹಿತಿ

-ಈ ಮಾನದಂಡದಲ್ಲಿ ಸಚಿವರ ಮೌಲ್ಯಮಾಪನ ಮಾಡಿಲ್ಲ

| ಮಾನದಂಡ | ನಿಗದಿ ಮಾಡಿದ ಅಂಕಗಳು | ದತ್ತಾಂಶ ವಿವರಣೆ |
|---|---|---|

| | | |
|---|---|---|
| ವಿಧಾನಸಭೆಯಲ್ಲಿ ಹಾಜರಾತಿ ಶೇಕಡಾವಾರು | 20 | • **ಮಾಹಿತಿ ಮೂಲ:** ಕರ್ನಾಟಕ ವಿಧಾನಸಭೆ ಸಚಿವಾಲಯ<br>• **ವೆಬ್ ಸೈಟ್**:http://www.kla.kar.nic.in/assembly/assembly.htm<br>• **ಅವಧಿ** : 2013-2018<br>• **ವಿಧಾನಸಭಾ ಅಧಿವೇಶನಗಳ ಸಂಖ್ಯೆ** :16<br>• **ಅಧಿವೇಶನ ನಡೆದ ಒಟ್ಟು ದಿನಗಳು** :232<br>*ಈ ಮಾನದಂಡದಲ್ಲಿ ಸಚಿವರ ಮೌಲ್ಯಮಾಪನ ಮಾಡಿಲ್ಲ |
| ಚುಕ್ಕೆ ಗುರುತಿನ ಪ್ರಶ್ನೆಗಳು | 20 | • **ಮಾಹಿತಿ ಮೂಲ:** ಕರ್ನಾಟಕ ವಿಧಾನಸಭೆ ಸಚಿವಾಲಯ<br>• **ವೆಬ್ ಸೈಟ್**: http://www.kla.kar.nic.in/assembly/assembly.htm<br>• **ಚುಕ್ಕೆ ಗುರುತಿನ ಪ್ರಶ್ನೆಗಳು** ಶಾಸಕರು ನಿರ್ದಿಷ್ಟ ಸಚಿವರನ್ನು ಕೇಳುವ ರಚನಾತ್ಮಕ ಪ್ರಶ್ನೆಗಳಾಗಿವೆ. ಈ ಪ್ರಶ್ನೆಗಳನ್ನು ಸಭಾಧ್ಯಕ್ಷರಿಗೆ ಮುಂಚಿತವಾಗಿ ಸಲ್ಲಿಸಲಾಗುತ್ತದೆ ಮತ್ತು ಸಚಿವರು / ಸರ್ಕಾರದಿಂದ ಲಿಖಿತ ಉತ್ತರವನ್ನು ನಿರೀಕ್ಷಿಸಬಹುದು<br>• **ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ಚುಕ್ಕೆ ಗುರುತಿನ ಪ್ರಶ್ನೆಗಳು:** ಶಾಸಕರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ನಿರ್ದಿಷ್ಟವಾದ ಸಮಸ್ಯೆಗಳನ್ನು ನಿರ್ದಿಷ್ಟಪಡಿಸಿದ ಉಪ ಪ್ರಶ್ನೆಗಳನ್ನು ಹೊಂದಿರುವ ಚುಕ್ಕೆ ಗುರುತಿನ ಪ್ರಶ್ನೆಗಳು<br>*ಈ ಮಾನದಂಡದಲ್ಲಿ ಸಚಿವರ ಮೌಲ್ಯಮಾಪನ ಮಾಡಿಲ್ಲ |
| ಚುಕ್ಕೆ ಗುರುತಲ್ಲದ ಪ್ರಶ್ನೆಗಳು | 5 | • **ಮಾಹಿತಿ ಮೂಲ:** ಕರ್ನಾಟಕ ವಿಧಾನಸಭೆ ಸಚಿವಾಲಯ<br>• **ವೆಬ್ ಸೈಟ್**: http://www.kla.kar.nic.in/assembly/assembly.htm<br>• **ಚುಕ್ಕೆ ಗುರುತಲ್ಲದ ಪ್ರಶ್ನೆಗಳು** ಶಾಸಕರು ಪೂರ್ವಸೂಚನೆ ಇಲ್ಲದೆ ಸದನದಲ್ಲಿ ಕೇಳುವ ಪ್ರಶ್ನೆಗಳು. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಯಾವುದೇ ಲಿಖಿತ ಉತ್ತರವಿಲ್ಲ<br>*ಈ ಮಾನದಂಡದಲ್ಲಿ ಸಚಿವರ ಮೌಲ್ಯಮಾಪನ ಮಾಡಿಲ್ಲ |
| ಶೇಕಡಾವಾರು ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ | 20 | • **ಮಾಹಿತಿ ಮೂಲ: : ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ** ಕುರಿತು ನಡೆಸಿದ ಸಮೀಕ್ಷೆ<br>• **ವೆಬ್ ಸೈಟ್**: https://politics.bpac.in/mla-lad/<br>• **ದತ್ತಾಂಶ: 4 ವರ್ಷಗಳಿಗೆ ಸಂಬಂಧಿಸದ್ದು** (2013-2017)<br>• **ಶಾಸಕರ ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ** ಕಾರ್ಯಕ್ರಮದಡಿ ಪ್ರತಿ ಶಾಸಕನಿಗೆ ನಿಗದಿತ ಅನುದಾನ ನಿಗದಿಗೊಳಿಸುವ ಮೂಲಕ ಕ್ಷೇತ್ರದ ಸಣ್ಣ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅವಕಾಶ ಮಾಡಿಕೊತ್ತದೆ. ವರ್ಷಕ್ಕೆ 2 ಕೋಟಿ ರೂ ಅನುದಾನ ನೀಡಲಾಗುತ್ತಿದ್ದು, ಕ್ಷೇತ್ರದ ಆದ್ಯತೆಯ ಸಮಸ್ಯೆಗಳನ್ನು ಪರಿಹರಿಸಲು ಈ ಮೊತ್ತ ಖರ್ಚು ಮಾಡಬಹುದಾಗಿದೆ. |
| ಗ್ರಹಣಶಕ್ತಿ ಅಧ್ಯಯನ | 15 | • **ಮಾಹಿತಿ ಮೂಲ:** ಮತದಾರರ ಆದ್ಯತೆಗಳ ವಿಶ್ಲೇಷಣೆಯ ಕುರಿತು ಎಡಿಆರ್-ದಕ್ಷ್ ನಡೆಸಿದ ಸಮೀಕ್ಷಾ ವರದಿ (ಡಿಸೆಂಬರ್ 17 - ಫೆಬ್ರುವರಿ 18)<br>• **ವೆಬ್ ಸೈಟ್**: https://adrindia.org/sites/default/files/Karnataka_2018_Survey_Report.pdf |
| ವಿದ್ಯಾರ್ಹತೆ | 5 | • **ಮಾಹಿತಿ ಮೂಲ:** ಶಾಸಕರು 2013ರಲ್ಲಿ ನಾಮಪತ್ರಗಳನ್ನು ಸಲ್ಲಿಸುವಾಗ ಸಲ್ಲಿಸಿದ ಅಫಿಡವಿಟ್ ಗಳು<br>• **ವೆಬ್ ಸೈಟ್**: http://myneta.info/karnataka2013/ |
| ಅಪರಾಧ ದಾಖಲೆ | 5 | • **ಮಾಹಿತಿ ಮೂಲ:** ಎಡಿಆರ್ ನಡೆಸಿದ ಅಪರಾಧ ಹಿನ್ನೆಲೆ ಸಮೀಕ್ಷೆ ಶಾಸಕರು 2013ರಲ್ಲಿ ನಾಮಪತ್ರಗಳನ್ನು ಸಲ್ಲಿಸುವಾಗ ನೀಡಿದ ಆರ್ಥಿಕ,ಶೈಕ್ಷಣಿಕ ಲಿಂಗ ಮತ್ತಿತರ ವಿವರಗಳು<br>• **ವೆಬ್ ಸೈಟ್**: https://adrindia.org/content/karnataka-assembly-elections-2013-analysis-criminal-background-financial-education-gender |
| ಸಾಮಾಜಿಕ ಜಾಲತಾಣ | 10 | • **ಮಾಹಿತಿ ಮೂಲ:** ಫೇಸ್ ಬುಕ್, ಟ್ವಿಟ್ಟರ್ ಅಧಿಕೃತ ಖಾತೆಗಳು<br>• ಶಾಸಕರು.ಸಚಿವರ ಫೇಸ್ ಬುಕ್ ಅಧಿಕೃತ ಖಾತೆಗಳ ಲೈಕ್ ಗಳ ಸಂಖ್ಯೆ<br>• ಶಾಸಕರು.ಸಚಿವರ ಟ್ವಿಟ್ಟರ್ ಅಧಿಕೃತ ಖಾತೆಯ ಫಾಲೋಯರ್ಗಳ ಸಂಖ್ಯೆ |

**ಬಿ.ಪ್ಯಾಕ್**
ಅಂದದೂರು ಬೆಂಗಳೂರು

## ಅಧ್ಯಯನದ ಪ್ರಮುಖ ಸಾರಾಂಶ

- 9 ಶಾಸಕರು 75% ಮತ್ತು ಹೆಚ್ಚು ಅಂಕ ಪಡೆದಿದ್ದಾರೆ
- 10ಶಾಸಕರು 50% ರಿಂದ 75%
- 8 ಶಾಸಕರು 50%
- ಒಬ್ಬ ಶಾಸಕರು ಮಾತ್ರ ಶೇ 96ರಷ್ಟು ವಿಧಾನಸಭಾ ಕಲಾಪಗಳಲ್ಲಿ ಭಾಗವಹಿಸಿದ್ದಾರೆ (ಡಾ. ಸಿ.ಎನ್.ಅಶ್ವತ್ಥ ನಾರಾಯಣ್)
- ವಿಧಾನಸಭೆ ಕಲಾಪಗಳಲ್ಲಿ ಒಟ್ಟು 262 ಚುಕ್ಕೆ ಗುರುತಿನ ಹಾಗೂ 3356 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳನ್ನು ಕೇಳಲಾಯಿತು
- 19 ಶಾಸಕರು ಶೂನ್ಯ ಅಪರಾಧ ಪ್ರಕರಣಗಳನ್ನು ಹೊಂದಿದ್ದು, ಇಬ್ಬರು ಶಾಸಕರು 4 ಅಪರಾಧ ಪ್ರಕರಣಗಳನ್ನು ಹೊಂದಿದ್ದಾರೆ
- 18 ಶಾಸಕರು ಶೇ.95ಕ್ಕೂ ಹೆಚ್ಚು ಶಾಸಕ ಅಭಿವೃದ್ಧಿ ನಿಧಿ ವೆಚ್ಚ ಮಾಡಿದ್ದಾರೆ. ಮೂವರು ಶಾಸಕರು ಶೇ.90 ಮತ್ತು 94% ನಿಧಿ ಖರ್ಚು ಮಾಡಿದ್ದಾರೆ
- 3 ಶಾಸಕರು ಸ್ನಾತಕೋತ್ತರ ಪದವೀಧರರು, 17 ಪದವೀಧರರು, ಇಬ್ಬರು ಪಿಯುಸಿ ಮತ್ತು 5 ಶಾಸಕರು 10 ನೇ ತರಗತಿಯವರು. ಯಾವುದೇ ಶಾಸಕರು 10 ನೇ ತರಗತಿಗಿಂತಲೂ ಕಡಿಮೆ ವ್ಯಾಸಂಗ ಮಾಡಿಲ್ಲ.
- ಎಲ್ಲಾ ಶಾಸಕರು ಸಾಮಾಜಿಕ ಮಾಧ್ಯಮದಲ್ಲಿ ಫೇಸ್ಬುಕ್ ಮತ್ತು ಟ್ವಿಟ್ಟರ್ ಖಾತೆ ಹೊಂದಿದ್ದಾರೆ.

ಶಾಸಕರ ಮೌಲ್ಯಮಾಪನ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಬಿ.ಪ್ಯಾಕ್ ಉಪಾಧ್ಯಕ್ಷ ಟಿ.ವಿ. ಮೋಹನ್ದಾಸ್ ಪೈ ಅವರು ಮಾತನಾಡಿ "ಚುನಾಯಿತ ಪ್ರತಿನಿಧಿಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು ಬಿ.ಪ್ಯಾಕ್ ಬದ್ಧತೆಯಿಂದ ನಾಗರಿಕರನ್ನು ಸಂಪರ್ಕಿಸಿ ಮೌಲ್ಯಮಾಪನ ಕಸರತ್ತು ನಡೆಸಿದೆ. ಮೇ 12ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬೆಂಗಳೂರಿನ ನಾಗರಿಕರು ಮನೆಯಿಂದ ಹೊರಬಂದು ದೊಡ್ಡ ಸಂಖ್ಯೆಯಲ್ಲಿ ಮತ ಚಲಾಯಿಸಬೇಕು ಮತ್ತು ಮುಂದಿನ ಐದು ವರ್ಷಗಳಲ್ಲಿ ನಗರವನ್ನು ಸಮರ್ಥವಾಗಿ ನಿರ್ವಹಿಸುವ ಜವಾಬ್ದಾರಿಯುತ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು" ಎಂದು ಹೇಳಿದರು.

"ಬಿ.ಪ್ಯಾಕ್ ಮತ್ತು ಐಕೇರ್ ಸಂಸ್ಥೆಗಳು ಅಭಿವೃದ್ಧಿಪಡಿಸಿದ ವಿಧಾನದ ಆಧಾರದ ಮೇಲೆ ಪ್ರತಿ ಮಾನದಂಡಕ್ಕೆ ನೀಡಲಾದ ಅಂಕಗಳೊಂದಿಗೆ ಸಾರ್ವಜನಿಕ ಡೊಮೇನ್ನಲ್ಲಿ ಲಭ್ಯವಿರುವ ದತ್ತಾಂಶ ಆಧಾರದ ಮೇಲೆ 8 ಮಾನದಂಡಗಳ ಸಂಬಂಧದಲ್ಲಿ ಶಾಸಕರ ಕಾರ್ಯನಿರ್ವಹಣೆಯ ವಿಶ್ಲೇಷಣೆಯಾಗಿದೆ. ಚುನಾವಣಾ ಚರ್ಚೆಗಳಲ್ಲಿ ವಸ್ತುನಿಷ್ಠತೆಯನ್ನು ತರಲು ಮತ್ತು ಮತದಾರರನ್ನು ತಮ್ಮ ಚುನಾಯಿತ ಪ್ರತಿನಿಧಿಗಳೊಂದಿಗೆ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಲು ವಿಶ್ಲೇಷಣೆಯ ಉದ್ದೇಶವಾಗಿದೆ. ಇದನ್ನು ಶಾಸಕರ ಸಮಗ್ರ ಮೌಲ್ಯಮಾಪನ ಮತ್ತು ಶಾಸಕರು ಕೈಗೊಂಡ ಕೆಲಸದ ಗುಣಮಟ್ಟವೆಂದು ವ್ಯಾಖ್ಯಾನಿಸಬಾರದು" ಎಂದು ಬಿ.ಪ್ಯಾಕ್ ಗೌರವ ವ್ಯವಸ್ಥಾಪಕ ಟ್ರಸ್ಟಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀಮತಿ ರೇವತಿ ಅಶೋಕ್ ಹೇಳಿದ್ದಾರೆ.

ಹೆಚ್ಚಿನ ವಿವರಗಳಿಗೆ ದಯಮಾಡಿ ಭೇಟಿ ನೀಡಿ ವೆಬ್ಸೈಟ್: https://politics.bpac.in/mla_rating/

**ಸಂಪರ್ಕ:**

ಬಿ.ಪ್ಯಾಕ್
ಅಂದದೂರು ಬೆಂಗಳೂರು

ಶರತ್ ಎಸ್.ಆರ್ | sharath@bpac.in |+91-9886196640
ಸಚಿನ್ ತಂತ್ರಿ | communication@bpac.in | +91- 9740511162
ರಾಘವೇಂದ್ರ ಹೆಚ್.ಎಸ್ | raghavendra@bpac.in | +91- 9739328099

**ಬಿ.ಪ್ಯಾಕ್ ಕುರಿತಂತೆ:**

ಬೆಂಗಳೂರು ರಾಜಕೀಯ ಕಾರ್ಯ ಸಮಿತಿಯು (ಬಿ.ಪ್ಯಾಕ್) ಪಕ್ಷಪಾತರಹಿತ ನಾಗರಿಕರ ಗುಂಪಾಗಿದ್ದು, ಬೆಂಗಳೂರಿನ ಆಡಳಿತ ಸುಧಾರಣೆ ಮತ್ತು ಪ್ರತಿ ನಾಗರಿಕರ ಜೀವನ ಗುಣಮಟ್ಟವನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದೆ. ಬಿ.ಪ್ಯಾಕ್ ಸರ್ಕಾರದ ಎಲ್ಲೆಡೆ ಉತ್ತಮ ಆಡಳಿತ ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು, ಸಮಗ್ರತೆ ಮತ್ತು ಪಾರದರ್ಶಕತೆಯನ್ನು ಹೊಂದುವ ನಿರ್ದಿಷ್ಟ ಗುರಿಯನ್ನು ಹೊಂದಿದೆ. ನಗರದಲ್ಲಿನ ಮೂಲಭೂತ ಸೌಕರ್ಯಗಳ ಗುಣಮಟ್ಟವನ್ನು ಹೆಚ್ಚಿಸುವುದು, ಬೆಂಗಳೂರು ನಗರದಲ್ಲಿ ಆಡಳಿತದ ಎಲ್ಲಾ ಹಂತಗಳಲ್ಲಿ ಸಾರ್ವಜನಿಕ ಪ್ರತಿನಿಧಿಗಳನ್ನು ಆರಿಸಲು  ಬಲವಾದ ಅಭ್ಯರ್ಥಿಗಳನ್ನು ಗುರುತಿಸುವುದು ಮತ್ತು ಬೆಂಬಲವನ್ನು ಅಭಿವೃದ್ಧಿಪಡಿಸುವುದು ಬಿ.ಪ್ಯಾಕ್ ಉದ್ದೇಶವಾಗಿದೆ.